ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
Karnataka Neeravari Nigam Limited
(A Government of Karnataka Enterprise)

ಕನೀನಿ/ಆರ್ಥಿಕ/ರಾಜಧನ/2023-24/6513 ದಿ: 15.03.2024

ಸುತ್ತೋಲೆ

ವಿಷಯ: ನಿಗಮದ ಕಾಮಗಾರಿಗಳಲ್ಲಿ ಬಳಕೆ ಮಾಡುವ ಉಪಖನಿಜಗಳಿಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಗಣಿ ಗುತ್ತಿಗೆ ಮಂಜೂರು ಮಾಡಲಾದ ಉಪಖನಿಜ ಗಣಿ ಗುತ್ತಿಗೆದಾರರಿಂದ "ಖನಿಜ ರವಾನೆ ಪರವಾನಿಗೆ" (Mineral Dispatch Permit-MDP) ಪಡೆಯುವುದನ್ನು ಕಡ್ಡಾಯಗೊಳಿಸುವ ಕುರಿತು.

ಉಲ್ಲೇಖ: ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರ ಸುತ್ತೋಲೆ ದಿ: 07.11.2023.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಕಾಮಗಾರಿಗಳಲ್ಲಿ ಬಳಸುವ ಉಪಖನಿಜಗಳಿಗೆ "ಖನಿಜ ರವಾನೆ ಪರವಾನಿಗೆ" (MDP) ಯನ್ನು ಗುತ್ತಿಗೆದಾರರಿಂದ ಕಡ್ಡಾಯವಾಗಿ ಪಡೆದು ಖನಿಜ ಸಾಗಾಣಿಕೆ ಮಾಡುವ ಬಗ್ಗೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಉಲ್ಲೇಖಿತ ಸುತ್ತೋಲೆಯಲ್ಲಿ ಸೂಕ್ತ ಮಾರ್ಗದರ್ಶನಗಳನ್ನು ಹೊರಡಿಸಿರುತ್ತಾರೆ. ಆದರೆ, AG ರವರು 2022-23ನೇ ಸಾಲಿನ ಲೆಕ್ಕಪತ್ರಗಳ ಪರಿಶೋಧನೆಯ ಸಂದರ್ಭದಲ್ಲಿ, ಗುತ್ತಿಗೆದಾರರಿಂದ ಪೂರ್ಣಪ್ರಮಾಣದ MDP ಗಳನ್ನು ಪಡೆಯಲಾಗಿರುವುದಿಲ್ಲವೆಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ.

ಈ ಹಿನ್ನಲೆಯಲ್ಲಿ, ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರ ಉಲ್ಲೇಖಿತ ಸುತ್ತೋಲೆಯು ಸ್ವಯಂವೇದ್ಯವಾಗಿದ್ದು, ಇದರೊಂದಿಗೆ ಲಗತ್ತಿಸುತ್ತಾ, ಇದರಲ್ಲಿನ ಅಂಶಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸಂಬಂಧಪಟ್ಟ ಎಲ್ಲಾ ಅಧಿಕಾರಿ/ಸಿಬ್ಬಂದಿಗಳಿಗೆ ಸೂಚಿಸಿದೆ. ಇದರ ಕಾರ್ಯಾನುಷ್ಠಾನಗೊಳಿಸಲು ವಿಫಲರಾದ ಪ್ರಕರಣಗಳು ಕಂಡುಬಂದಲ್ಲಿ, ಉಂಟಾಗುವ ಆರ್ಥಿಕ ನಷ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ತಮ್ಮ ವಿಶ್ವಾಸಿ,

ವ್ಯವಸ್ಥಾಪಕರು ನಿರ್ದೇಶಕರು

ಇವರಿಗೆ:

1. ಎಲ್ಲಾ ಮುಖ್ಯ / ಅಧೀಕ್ಷಕ / ಕಾರ್ಯಪಾಲಕ ಅಭಿಯಂತರರು, ಕನೀನಿನಿ
2. ತಾಂತ್ರಿಕ ನಿರ್ದೇಶಕರು, ಕನೀನಿ, ನೋಂದಾಯಿತ ಕಛೇರಿ, ಬೆಂಗಳೂರು
3. ಜಿ.ಎಂ-ಎಫ್, ಕನೀನಿ, ನೋಂದಾಯಿತ ಕಛೇರಿ, ಬೆಂಗಳೂರು
4. ಮುಖ್ಯ ಲೆಕ್ಕಾಧಿಕಾರಿಗಳು, ಕನೀನಿ, ಕೇಂದ್ರ ಕಛೇರಿ, ಧಾರವಾಡ

A Concern for Water



Regd. Office : 4th Floor, Coffee Board Building, No. 1, Dr. B.R. Ambedkar Veedhi, Bangalore - 560 001. Ph : 22283074-78,
CIN : U85110KA1998SGC024503 GST No.: 29AABCK6647B1ZK Website : www.knnlindia.com